


Latinsko Srpski Recnik Pdf Free



ಗೆದ್ದು, ಕರ್ನಾಟಕದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಕೆಲ ಕ್ಷಣಗಳ ಮೊದಲು ಸಿದ್ಧರಾಮಯ್ಯನವರು ಮಾರ್ಗದರ್ಶನ ಮತ್ತು ಆಶೀರ್ವಾದಕ್ಕಾಗಿ ಭೇಟಿಮಾಡಿದ್ದು ಯಾವ ಪಕ್ಷದೊಂದಿಗೂ ಗುರುತಿಸಿಕೊಳ್ಳದ, ನಿರ್ಭೀತ ಚಿಂತಕ, ಹಿರಿಯ ಗಾಂಧೀವಾದಿ, ಸರ್ವೋದಯದ ಕನಸುಗಾರ ಡಾ. ಎಚ್.ಎಸ್. ದೊರೆಸ್ವಾಮಿಯವರನ್ನು!

1918ನೇ ಏಪ್ರಿಲ್ 10ರಂದು ಕನಕಪುರ ತಾಲ್ಲೂಕಿನ ಹಾರೋಹಳ್ಳಿಯಲ್ಲಿ ಹುಟ್ಟಿದ ಎಚ್.ಎಸ್. ದೊರೆಸ್ವಾಮಿಯವರು ತಮ್ಮ ಹುಟ್ಟೂರಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ, ಬೆಂಗಳೂರಿನಲ್ಲಿ ಪ್ರೌಢಶಾಲೆ, ಕಾಲೇಜುಗಳಲ್ಲಿ ಕಲಿತು, ಉಪಾಧ್ಯಾಯರಾಗಿ ಕೆಲವು ತಿಂಗಳು ಸೇವೆ ಸಲ್ಲಿಸಿ, ಕ್ವಿಟ್ ಇಂಡಿಯಾ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿ, ಸೆರೆವಾಸ ಅನುಭವಿಸಿ, ಜೀವನೋಪಾಯಕ್ಕಾಗಿ ಮೈಸೂರಿನಲ್ಲಿ ಟಿಂಬರ್ ಡಿಪೋ, ಪುಸ್ತಕ ಪ್ರಕಾಶನ ನಡೆಸಿ, ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ ಹೋರಾಟಕ್ಕೆ ಮರಳಿ, 'ಪೌರವಾಣಿ' ಮತ್ತು 'ಪೌರವೀರ' ಪತ್ರಿಕೆಯ ಸಂಪಾದಕರಾಗಿ ದುಡಿದು, ಮೈಸೂರು ಅರಸೊತ್ತಿಗೆಯನ್ನು ತೆರೆವುಗೊಳಿಸಿ, ಪ್ರಜಾಸತ್ತಾತ್ಮಕ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಶ್ರಮಿಸಿ, ರಾಜಕೀಯದವರ ಮೆರಗಿನಾಟಕ್ಕೆ ಬೇಸತ್ತು ಹೊರಬಂದು, ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ದುಡಿದು, ಅಲ್ಲಿನ ಜಾತೀಯತೆಯ ವಾತಾವರಣದಿಂದ ನೊಂದು, ವಿನೋಬಾಜಿಯುವರ ಭೂದಾನ ಚಳವಳಿಯು ಸರ್ವೋದಯ ಮಂತ್ರ ಜಪಿಸುತ್ತಾ ಕರ್ನಾಟಕದ ಹಲವು ಕಡೆ ಸುತ್ತಾಡಿ, ಕಾಲಕಾಲಕ್ಕೆ ಎದುರಾಗುವ ಸಮಸ್ಯೆಗಳ ವಿರುದ್ಧ ಹೋರಾಡುತ್ತಾ, ಈಗಲೂ ಹೋರಾಟದ ಮುಂಚೂಣಿಯಲ್ಲಿ ಕಾಣಿಸಿಕೊಳ್ಳುತ್ತಿರುವ ಹಿರಿಯ ಉತ್ಸಾಹಿ ಡಾ. ಎಚ್.ಎಸ್. ದೊರೆಸ್ವಾಮಿಯವರ ಜೀವನವನ್ನು ಹದಿಮೂರು ಅಧ್ಯಾಯಗಳಲ್ಲಿ, ಎಪ್ಪತ್ತು ಪುಟಗಳಲ್ಲಿ ಹಿಡಿದಿಡುವ ಕಷ್ಟದ ಕೆಲಸವನ್ನು ಅಷ್ಟೇ ಉತ್ಸಾಹದಿಂದ ಮಾಡಿದ್ದಾರೆ ಈ. ಬಸವರಾಜು.

ದೊರೆಸ್ವಾಮಿಯವರು ಭಾಗವಹಿಸಿರುವ ಹೋರಾಟಗಳು, 95 ವರ್ಷಗಳ ತುಂಬುಜೀವನದಲ್ಲಿ ಕಂಡಿರುವ ನೋವು–ನಲಿವುಗಳು, ನೀಡಿರುವ ಸಂದರ್ಶನಗಳು, ಸಂದೇಶಗಳು, ಶಿಕ್ಷಣಕ್ಕಾಗಿ ಪಟ್ಟಿರುವ ಶ್ರಮ, ಎಲ್ಲರಿಗೂ ಒಳಿತಾಗಬೇಕು, ಎಲ್ಲರಲ್ಲೂ ಒಳ್ಳೆಯತನ ಬೆಳೆಯಬೇಕು ಎಂಬ ಹಂಬಲದ ಬಗ್ಗೆ ಎಷ್ಟು ಬರೆದರೂ ಮತ್ತಷ್ಟು ಹೇಳುವುದು ಉಳಿದೇ ಹೋಗುತ್ತದೆ! ಹೋರಾಟದ ಯಶಸ್ಸನ್ನು ಸಂಭ್ರಮಿಸುವ ಸಂದರ್ಭದಲ್ಲೂ ನೋವಿನ ಎಳೆ ಹಾದುಹೋಗುವುದು ಹಿರಿಯ ಜೀವಕ್ಕೆ ಸಂತಸ ತರುವುದಿಲ್ಲ. ಏಕೀಕೃತ ಮೈಸೂರಿನ ಅಭಿವೃದ್ಧಿಯ ಕನಸು ಕಾಣುತ್ತಾ, ಸರ್ದಾರ್ ಪಟೇಲ್ ಅವರ ನಿದೇಶನದಂತೆ ಮಹಾರಾಜರನ್ನು ಪಟ್ಟದಿಂದ ಇಳಿಸಿ ಸಾಮಾನ್ಯ ಪ್ರಜೆಯ ಸರ್ಕಾರವನ್ನು ಸ್ಥಾಪಿಸಿದ ನಂತರ ರಾಜ್ಯದ ರಾಜಕಾರಣದಲ್ಲಿ ಕಂಡುಬಂದ ಏರಿಳಿತಗಳಿಂದ ಬೇಸರಗೊಂಡು, 'ಏಕೀಕರಣವಾದರೆ ಬಹುಸಂಖ್ಯಾತರೂ ಅಲ್ಪಸಂಖ್ಯಾತರೂ ಹೊಂದಿಕೊಂಡು, ಅನ್ಯೋನ್ಯತೆಯಿಂದ ಕರ್ನಾಟಕವನ್ನು ಮುನ್ನಡೆಸುವರೆಂದೂ, ಜಾತೀಯತೆ ಕಡಿಮೆಯಾಗುವುದೆಂದೂ ನಂಬಿದ್ದ ನಮಗೆ ಭ್ರಮನಿರಸನವಾಗಿದೆ. ಏಕೀಕರಣದಿಂದಾಗಿ ಕರ್ನಾಟಕ ವಿಶಾಲವಾಯಿತೇ ವಿನಃ ಇಲ್ಲಿನ ಮನಸ್ಸುಗಳು ವಿಶಾಲವಾಗಲಿಲ್ಲ. ನಾವೆಲ್ಲ ಒಂದು ಎಂಬ ಭಾವನೆಯಾಗಲಿ, ಜಾತ್ಯತೀತವಾಗಿ ಬಾಳಬೇಕೆಂಬ ಆಸಕ್ತಿಯಾಗಲಿ ಬೆಳೆಯಲಿಲ್ಲ' ಎಂದು ವಿಷಾದದಿಂದ ನುಡಿಯುತ್ತಾರೆ ದೊರೆಸ್ವಾಮಿಯವರು.

ಇತಿಹಾಸದ ವಸ್ತುನಿಷ್ಠ ನಿರೂಪಣೆಯಂತೆ ಸಾಗುವ ಈ ಜೀವನಗಾಥೆ ಆರಂಭದಿಂದ ಕೊನೆಯವರೆಗೆ ಕಾಲಾನುಕ್ರಮದಲ್ಲಿ ಸಾಗದೇ ಪ್ರಸ್ತುತ ಸನ್ನಿವೇಶದಿಂದ ಹಿಂದಕ್ಕೆ ನೆಗೆದು, ಮಧ್ಯೆ ಎಲ್ಲಿಯೋ ಸುತ್ತಾಡಿ, ಇಸವಿಗಳ ಹಿಂದು ಮುಂದು ಓಡಾಡುತ್ತಲೇ ಪ್ರಮುಖ ಘಟನೆಗಳನ್ನು ವಿವರಿಸುತ್ತದೆ. ವ್ಯಕ್ತಿಗತ ಜೀವನದ ವಿವರಗಳು ಪ್ರಾಸಂಗಿಕವಾಗಿ ಚುಟುಕಿನಲ್ಲಿ ಬಂದು ಹೋಗಿದ್ದು ಅವರ ಬಗ್ಗೆ ಇನ್ನಷ್ಟು ವಿವರಗಳಿದ್ದರೆ ಚೆನ್ನಾಗಿರುತ್ತಿತ್ತು. ವಿದ್ಯಾರ್ಥಿ ಸಮುದಾಯದೊಂದಿಗೆ ಅವರು ಸೇರಿ ಶಿಕ್ಷಣ ನೀತಿಯ ಅನುಷ್ಠಾನಕ್ಕೆ, ವಿದ್ಯಾರ್ಥಿಗಳ ಅಭ್ಯುದಯಕ್ಕೆ ನಡೆಸಿದ, ಭ್ರಷ್ಟಾಚಾರದ ನಿರ್ಮೂಲನಕ್ಕೆ ಈಗಲೂ ನಡೆಸುತ್ತಲೇ ಇರುವ ಹೋರಾಟಕ್ಕೆ ಹೆಚ್ಚು ಒತ್ತು ಸಿಕ್ಕಿದ್ದರೆ 'ಸಲಾಂ ಅಪ್ನಾ ದೇಶ್' ಎಂದು ಹೆಮ್ಮೆಯಿಂದ ಬೀಗುವ ಹುರುಪಿನ ಯುವಜನರ ಪಡೆಗೆ ಮಾರ್ಗದರ್ಶನವಾಗುತ್ತಿತ್ತು! ಅವರೊಡನೆ ಒಂದು ಸುದೀರ್ಘ ಸಂದರ್ಶನ ನಡೆಸಿ, ಚಿತ್ರಸಹಿತ ಅದನ್ನು ಈ ಪುಸ್ತಕದ ಕೊನೆಯಲ್ಲಿ ಸೇರಿಸಿದ್ದರೆ ಇನ್ನಷ್ಟು ತೂಕ ಹೆಚ್ಚುತ್ತಿತ್ತು. ಒಟ್ಟಿನಲ್ಲಿ, ಡಾ. ಎಚ್.ಎಸ್. ದೊರೆಸ್ವಾಮಿ ಎಂಬ ಸರ್ವೋದಯದ ಹೋರಾಟಗಾರ ಮತ್ತು ಗಾಂಧೀವಾದಿ ಚಿಂತಕರನ್ನು ಇಂದಿನ ಪೀಳಿಗೆಯವರಿಗೆ ಪರಿಚಯಿಸಿದ ಸಾರ್ಥಕತೆ ಈ ಬಸವರಾಜು ಅವರದ್ದು ಎನ್ನುವುದರಲ್ಲಿ ಎರಡು ಮಾತಿಲ್ಲ. ಇದನ್ನು ಓದಿ, ಅವರಂತೆ ಸಾಮಾಜಿಕ ಕಳಕಳಿ ಬೆಳೆಸಿಕೊಳ್ಳಬೇಕಾದ ಜವಾಬ್ದಾರಿ ನಮ್ಮ ಯುವಜನರ ಮೇಲಿದೆ. ಓದಬೇಕಷ್ಟೇ!

ಸಲಾಂ ಡಾ. ದೊರೆಸ್ವಾಮಿ! ಅಪ್ನಾ ದೇಶ್‌ಕಾ ಸಲಾಂ ತುಮ್‌ಕೋ! ಸಲಾಂ ಅಪ್ನಾ ದೇಶ್‌ಕೋ!

ಕೃತಿ : ಡಾ. ಎಚ್. ಎಸ್. ದೊರೆಸ್ವಾಮಿ
ಲೇಖಕರು : ಈ. ಬಸವರಾಜು
ಪ್ರಕಾಶಕರು : ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಬೆಂಗಳೂರು–560 019,
ಪ್ರಕಾಶನ ವರ್ಷ: 2013 ಮೊದಲ ಮುದ್ರಣ
ಪುಟಗಳು : 82
ಬೆಲೆ : ರೂ.60/–

ಪರಿಚಯ ಲೇಖನ: ಬೇದ್ರೆ ಮಂಜುನಾಥ, ಹಾಸನ
http://bedrefoundation.blogspot.in
e-mail : bedre.manjunath@gmail.com

ಬೇದ್ರೆ ಪ್ರತಿಷ್ಠಾನ – ಅನೌಪಚಾರಿಕ ಶಿಕ್ಷಣ, ಸಂಶೋಧನೆ ಮತ್ತು ತರಬೇತಿ ಕೇಂದ್ರ, ಟೀಚರ್ಸ್ ಕಾಲನಿ, ಚಿತ್ರದುರ್ಗ.
ಸಂಪರ್ಕ ವಿಳಾಸ : ಕಾರ್ಯಕ್ರಮ ನಿರ್ವಾಹಕರು, ಆಕಾಶವಾಣಿ ಕೇಂದ್ರ, ಹಾಸನ – 573 202 ಫೋನ್: 94485–89089
bedre_manjunath@yahoo.co.in



Latinsko Srpski Recnik Pdf Free



## latinsko srpski recnik

latinsko srpski recnik, latinsko srpski recnik pdf, latinsko srpski recnik cena, latinsko srpski recnik jovan djordjevic, latinsko srpski srpsko latinski recnik, medicinski recnik latinsko-srpski, englesko srpski recnik google, englesko srpski recnik translate, englesko srpski recnik lingea, englesko srpski recnik on line, englesko srpski recnik frazalnih glagola, englesko srpski recnik elektrotehnike

## latinsko srpski recnik cena

## latinsko srpski srpsko latinski recnik

624b518f5d